**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1**

**ಸಂಖ್ಯೆ: ಸಿ7(6 ) ವೇ ಅನು/05 /2011-12** **ದಿನಾಂಕ:15.10.2011**

# ಸುತ್ತೋಲೆ ತುರ್ತು

ದಿನಾಂಕ 15.10.2011ರಂದು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಸಂಬಂಧ ಸಭೆ ಸೇರಿ ಈ ಕೆಳಕಂಡ ನಿರ್ಣಯಗಳನ್ನು ನಿರ್ಧರಿಸಿ ಅದರಂತೆ ಕ್ರಮವಹಿಸಲು ಸೂಚನೆಯನ್ನು ನೀಡಲಾಗಿದೆ.

ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಸಂಬಂಧ ಅಧಿಕಾರಿಗಳ ತ್ರಿಸದಸ್ಯ ತಂಡವನ್ನು ರಚಿಸಲಾಗಿದ್ದು ತ್ರಿಸದಸ್ಯ ಸಮಿತಿಯ ಸದಸ್ಯರ ಪಟ್ಟಿಯು ಈ ಕೆಳಕಂಡಂತಿದೆ.

1) ತ್ರಿಸದಸ್ಯ ಸಮಿತಿಯ ಸದಸ್ಯರು ಒಮ್ಮೆ ಸಭೆ ಸೇರಿ ನಿರ್ವಹಿಸುವ ಕಾರ್ಯದ ಕುರಿತು ಚರ್ಚೆ ನಡೆಸಿಕೊಂಡು ಶಾಲೆಗಳಿಗೆ ಭೇಟಿ ನೀಡುವುದು;

2) ದಿನಾಂಕ 20.10.2011 ರಿಂದ 29.10.2011 ರವರೆಗೆ ನೀಡಲಾಗಿರುವ ಶಾಲೆಗಳನ್ನು ಪ್ರಥಮ ಸುತ್ತಿನಲ್ಲಿ ಭೇಟಿ ಮಾಡಿ ಶಾಲಾ ದಾಖಲೆಗಳನ್ನು ಪರಿಶೀಲಿಸುವುದು .

3) ದ್ವಿತೀಯ ಸುತ್ತಿನಲ್ಲಿ ಅಂದರೆ ದಿನಾಂಕ 2.11.2011 ರಿಂದ 5.11.2011ರವರೆಗೆ ಶಾಲೆಗೆ ಭೇಟಿಮಾಡಿ ಮಕ್ಕಳ ಹಾಜರಾತಿಯನ್ನು ಗಮನಿಸುವುದು. ಭೇಟಿ ಮಾಡಿದ ಸಂಪೂರ್ಣ ವರದಿಯನ್ನು ದಿನಾಂಕ 10.11.2011ರ ಒಳಗಾಗಿ ನೀಡುವುದು.

4) ಶಾಲೆಯಲ್ಲಿ ಭೇಟಿ ಮಾಡಿ ಪರಿಶೀಲಿಸಿದ ಮಾಹಿತಿಗಳನ್ನು ಭರ್ತಿ ಮಾಡುವ ನಮೂನೆಯನ್ನು ಈ ಸುತ್ತೋಲೆಗೆ ಅನುಬಂಧಿಸಿದೆ.

| ಕ್ರಮ ಸಂಖ್ಯೆ | ಅಧಿಕಾರಿಗಳ ತಂಡ | ಭೇಟಿ ನೀಡಬೇಕಾಗಿರುವ ಜಿಲ್ಲೆಗಳು | ಅನುದಾನಕ್ಕೆ ಒಳಪಡಿಸ ಬೇಕಾದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಪ್ರಸ್ತಾವನೆಗಳ ಸಂಖ್ಯೆ | |
|---|---|---|---|---|
| | | | ಪ್ರಾಥಮಿಕ | ಪ್ರೌಢ |
| 1 | ನಿರ್ದೇಶಕರು (ಆರ್.ಎಂ.ಎಸ್.ಎ<br>ಸಹನಿರ್ದೇಶಕರು ( ಬೆಂಗಳೂರು ವಿಭಾಗ<br>ಉಪನಿರ್ದೇಶಕರು (ಅಭಿವೃದ್ಧಿ)ಬೆಂಗಳೂರು ಗ್ರಾಮಾಂತರ | ಬೆಂಗಳೂರು ಉತ್ತರ<br>ಬೆಂಗಳೂರು ದಕ್ಷಿಣ<br>ಬೆಂಗಳೂರು ಗ್ರಾಮಾಂತರ | **3** | **6** |
| 2 | ಅಪರ ನಿರ್ದೇಶಕರು (ಆಡಳಿತ)<br>ಸಹನಿರ್ದೇಶಕರು (ಎಸ್.ಎಸ್.ಎ-1)<br>ಉಪನಿರ್ದೇಶಕರು(ಅಭಿವೃದ್ಧಿ) ಚಾಮರಾಜನಗರ<br>ಉಪನಿರ್ದೇಶಕರು (ಅಭಿವೃದ್ಧಿ) ರಾಮನಗರ | ಚಾಮರಾಜನಗರ<br>ರಾಮನಗರ | **2** | **7** |
| 3 | ನಿರ್ದೇಶಕರು (ಪ್ರಾಥಮಿಕ)<br>ಸಹನಿರ್ದೇಶಕರು (ಕಾರ್ಯದರ್ಶಿಗಳು, ಕೆ.ಎಸ್.ಇ.ಇ.ಬಿ<br>ಉಪನಿರ್ದೇಶಕರು (ಅಭಿವೃದ್ಧಿ) ಮೈಸೂರು | ಮೈಸೂರು | **4** | **7** |
| 4 | ನಿರ್ದೇಶಕರು (ಪ್ರೌಢ ಶಿಕ್ಷಣ)<br>ಸಹನಿರ್ದೇಶಕರು (ಎಸ್.ಎಸ್.ಎ-3)<br>ಉಪನಿರ್ದೇಶಕರು (ಅಭಿವೃದ್ಧಿ) ಕೋಲಾರ | ಕೋಲಾರ | **3** | **7** |
| 5 | ನಿರ್ದೇಶಕರು (ಎಸ್.ಎಸ್.ಎ)<br>ಸಹನಿರ್ದೇಶಕರು (ಮ.ಉ.ಯೋ)<br>ಉಪನಿರ್ದೇಶಕರು (ಅಭಿವೃದ್ಧಿ) ಚಿತ್ರದುರ್ಗ<br>ಉಪನಿರ್ದೇಶಕರು (ಅಭಿವೃದ್ಧಿ) ತುಮಕೂರು | ಚಿತ್ರದುರ್ಗ<br>ತುಮಕೂರು | **7** | **3** |

| | | | | |
|---|---|---|---|---|
| 6 | ನಿರ್ದೇಶಕರು (ಡಿ.ಎಸ್.ಇ.ಆರ್.ಟಿ)<br>ಪ್ರಾಂಶುಪಾಲರು ಸಿ.ಟಿ.ಇ. ಮೈಸೂರು<br>ಉಪನಿರ್ದೇಶಕರು (ಅಭಿವೃದ್ದಿ) ಮಂಡ್ಯ | ಮಂಡ್ಯ | **6** | **3** |
| 7 | ವ್ಯವಸ್ಥಾಪಕ ನಿರ್ದೇಶಕರು ( ಪಠ್ಯ ಪುಸ್ತಕ)<br>ಸಹನಿರ್ದೇಶಕರು ( ಶಾಲಾ ಶಿಕ್ಷಣ)<br>ಉಪನಿರ್ದೇಶಕರು (ಅಭಿವೃದ್ದಿ) ಹಾಸನ | ಹಾಸನ<br>ಮಂಡ್ಯ | **9** | **1** |
| 8 | ನಿರ್ದೇಶಕರು ಕೆ.ಎಸ್.ಇ.ಇ.ಬಿ<br>ಪ್ರಾಂಶುಪಾಲರು ಸಿ.ಟಿ.ಇ, ಚಿತ್ರದುರ್ಗ<br>ಉಪನಿರ್ದೇಶಕರು (ಅಭಿವೃದ್ದಿ) ದಾವಣಗೆರೆ<br>ಉಪನಿರ್ದೇಶಕರು (ಅಭಿವೃದ್ದಿ) ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ<br>ದಾವಣಗೆರೆ | **8** | **3** |
| 9 | ಸಹನಿರ್ದೇಶಕರು ಮೈಸೂರು ವಿಭಾಗ<br>ಪ್ರಾಂಶುಪಾಲರು ಸಿ.ಟಿ.ಇ. ದಕ್ಷಿಣ ಕನ್ನಡ<br>ಉಪನಿರ್ದೇಶಕರು (ಅಭಿವೃದ್ದಿ) ಚಿಕ್ಕಮಗಳೂರು<br>ಉಪನಿರ್ದೇಶಕರು (ಅಭಿವೃದ್ದಿ) ದಕ್ಷಿಣ ಕನ್ನಡ | ಚಿಕ್ಕಮಗಳೂರು<br>ದಕ್ಷಿಣ ಕನ್ನಡ | **4** | **5** |
| 10 | ಸಹನಿರ್ದೇಶಕರು (ಎಸ್.ಎಸ್.ಎ –2)<br>ಸಹನಿರ್ದೇಶಕರು (ಆರ್.ಎಂ.ಎಸ್.ಎ)<br>ಉಪನಿರ್ದೇಶಕರು (ಅಭಿವೃದ್ದಿ) ಶಿವಮೊಗ್ಗ | ಶಿವಮೊಗ್ಗ | **7** | **2** |
| | **ಒಟ್ಟು** | | **53** | **44** |

(ತುಷಾರ್ ಗಿರಿ ನಾಥ್)
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ.

17/10

ಗೆ,

ಪ್ರತಿಯನ್ನು ಈ ಕೆಳಕಂಡ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

1) ನಿರ್ದೇಶಕರು (ಆರ್.ಎಂ.ಎಸ್.ಎ) (ಪ್ರಾಥಮಿಕ) (ಪ್ರೌಢಶಿಕ್ಷಣ) (ಎಸ್.ಎಸ್.ಎ) ( ಡಿ.ಎಸ್.ಇ.ಆರ್.ಟಿ) (ಕೆ.ಎಸ್.ಇ.ಇ.ಬಿ)
2) ವ್ಯವಸ್ಥಾಪಕ ನಿರ್ದೇಶಕರು (ಪಠ್ಯಪುಸ್ತಕ) ರವರಿಗೆ
3) ಅಪರ ನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು ರವರಿಗೆ
4) ಸಹ ನಿರ್ದೇಶಕರು, (ಕಾರ್ಯದರ್ಶಿಗಳು ಕೆ.ಎಸ್.ಇ.ಇ.ಬಿ) (ಎಸ್.ಎಸ್.ಎ–1, 2, 3 ) (ಮಧ್ಯಾಹ್ನ ಉಪಾಹಾರ ಯೋಜನೆ) (ಶಾಲಾ ಶಿಕ್ಷಣ) (ಬೆಂಗಳೂರು ವಿಭಾಗ) (ಮೈಸೂರು ವಿಭಾಗ) (ಆರ್.ಎಂ.ಎಸ್.ಎ)
5) ಪ್ರಾಂಶುಪಾಲರು, ಸರ್ಕಾರಿ ಶಿಕ್ಷಣ ಮಹಾವಿದ್ಯಾಲಯ, ಮೈಸೂರು, ಚಿತ್ರದುರ್ಗ, ದಕ್ಷಿಣ ಕನ್ನಡ
6) ಉಪನಿರ್ದೇಶಕರು (ಅಭಿವೃದ್ದಿ) ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ರಾಮನಗರ, ಮೈಸೂರು, ಕೋಲಾರ, ಚಿತ್ರದುರ್ಗ, ತುಮಕೂರು, ಮಂಡ್ಯ, ಹಾಸನ, ದಾವಣಗೆರೆ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಶಿವಮೊಗ್ಗ

E:\ತ್ರಿಸದಸ್ಯ ತಂಡ.doc

*ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 560001.*

# ಇಲಾಖಾ ತ್ರಿಸದಸ್ಯ ಸಮಿತಿಯಿಂದ ಪರಿಶೀಲಿಸುವ ನಮೂನೆ

*ವಿಷಯ* : 1987 ರಿಂದ 1994–95 ನೇ ಶೈಕ್ಷಣಿಕ ಸಾಲಿನ ಅವಧಿಯಲ್ಲಿ ಪ್ರಾರಂಭಿಸಿರುವ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಅನುದಾನಕ್ಕೆ ಒಳಪಡಿಸುವ ಸಂಬಂಧ ಇಲಾಖಾ ತ್ರಿಸದಸ್ಯ ಸಮಿತಿಯಿಂದ ಪರಿಶೀಲಿಸುವ ನಮೂನೆ.

| ಕ್ರ.ಸಂಖ್ಯೆ | ವಿಷಯ | ಪರಿಶೀಲಿಸಿದ ವಿವರ |
|---|---|---|
| 01 | 02 | 03 |
| 1 | ಖಾಸಗಿ ಪ್ರಾಥಮಿಕ ಶಾಲೆಯ ಹೆಸರು ಮತ್ತು ವಿಳಾಸ | |
| 2 | *1.* ಆಡಳಿತ ಮಂಡಳಿಯ ಹೆಸರು ಮತ್ತು ವಿಳಾಸ.<br>*2.* ಆಡಳಿತ ಮಂಡಳಿ ಯಾವ ವರ್ಗಕ್ಕೆ ಸೇರಿದೆ? | |
| 3 | ಖಾಸಗಿ ಪ್ರಾಥಮಿಕ / ಪ್ರೌಢಶಾಲೆ ಪ್ರಾರಂಭಿಸಲು ನೀಡಿದ ಸರ್ಕಾರಿ ಆದೇಶ ಸಂಖ್ಯೆ ಮತ್ತು ದಿನಾಂಕ [ಆದೇಶದ ಪ್ರತಿ ಲಗತ್ತಿಸಿ] | |
| 4 | ಖಾಸಗಿ ಪ್ರಾಥಮಿಕ / ಪ್ರೌಢಶಾಲೆ ಪ್ರಾರಂಭವಾದ ವರ್ಷ, ತಿಂಗಳು ಮತ್ತು ದಿನಾಂಕ | |
| 5 | ಖಾಸಗಿ ಪ್ರಾಥಮಿಕ / ಪ್ರೌಢಶಾಲೆಯ ಬೋಧನಾ ಮಾಧ್ಯಮ [ಕನ್ನಡ/ಮರಾಠಿ/ ಉರ್ದು/ಇತ್ಯಾದಿ] | |
| 6 | *1.* ಸದರಿ ಶಾಲೆಯನ್ನು ಶಿಕ್ಷಣ ಅಧಿನಿಯಮದ ಅಡಿಯಲ್ಲಿ ರಚಿತವಾಗಿರುವ ಕರ್ನಾಟಕ ಶಿಕ್ಷಣ ಸಂಸ್ಥೆಗಳು [ವರ್ಗೀಕರಣ ಮತ್ತು ಮೊಂದಣಿ]ನಿಯಮಾವಳಿ–1997ರ ಪ್ರಕಾರ ನೊಂದಾವಣೆಯಾಗಿದೆಯೇ?<br>*2.* ಆಡಳಿತ ಮಂಡಳಿಯ ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಸದಸ್ಯರನ್ನು ಒಳಗೊಂಡ ಆಡಳಿತ ಮಂಡಳಿ ಸದಸ್ಯರ ಇತ್ತೀಚಿನ ಪಟ್ಟಿ ಹಾಗೂ ಪಿ.ಟಿ.ಆರ್ [Present Term Renewal] ದೃಢೀಕೃತ ಪ್ರತಿ [ನೊಂದಾವಣೆ ಅಧಿಕಾರಿಯಿಂದ ಪಡೆದಿರುವುದನ್ನು ಲಗತ್ತಿಸತಕ್ಕದ್ದು] | |
| 8 | ನಿಯಮ ರೀತ್ಯಾ ಇಡಬೇಕಾದ ಸ್ಥಿರ ನಿಧಿ ಹಣವನ್ನು ಠೇವಣಿ ಇಡಲಾಗಿದೆಯೇ? [ದೃಢೀಕೃತ ದಾಖಲೆ ಒದಗಿಸತಕ್ಕದ್ದು] | |

| | | |
|---|---|---|
| | [ಸ್ಥಿರನಿಧಿ ಠೇವಣಿಯಲ್ಲಿ ವಿನಾಯಿತಿ ಸರ್ಕಾರದಿಂದ ದೊರೆತಿದ್ದಲ್ಲಿ ಆದೇಶ ಪ್ರತಿ ಒದಗಿಸುವುದು] | |
| 9 | ಚೆಕ್‌ಲಿಸ್ಟ್‌ನ ನಮೂನೆ-1ರಲ್ಲಿ ಮೂಲಭೂತ ಸೌಲಭ್ಯಗಳಿಗೆ ಸಂಬಂಧಿಸಿದ ಮಾಹಿತಿ ನೀಡಿ, ಪಡೆದಿರುವ ಅಂಕಗಳು ಎಷ್ಟು? ಈ ಬಗ್ಗೆ ತ್ರಿಸದಸ್ಯ ಸಮಿತಿಯ ಸ್ಪಷ್ಟ ಅಭಿಪ್ರಾಯ. | |
| 10 | ಶಾಲೆಯ ಲೆಕ್ಕ ಪತ್ರಗಳ ಪರಿಶೋಧನೆ [ಆಡಿಟ್] ಆಗಿರುವುದೇ? | |
| 11 | ಸದರಿ ಕಳೆದ ವರ್ಷದ ಶಾಲೆಯಲ್ಲಿನ ಪ್ರತಿಯೊಂದು ತರಗತಿ ಮತ್ತು ವಿಭಾಗದಲ್ಲಿನ ವಿದ್ಯಾರ್ಥಿಗಳ ದಾಖಲಾತಿ ಮತ್ತು ಹಾಜರಾತಿ ವಿವರ. | |

| ವರ್ಷ | ತರಗತಿ ವಾರು ದಾಖಲಾತಿ ಹಾಜರಾತಿ ವಿವರ | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|
| | 1ನೇ | | 2ನೇ | | 3ನೇ | | 4ನೇ | | 5ನೇ | | 6ನೇ | | 7ನೇ | | ಒಟ್ಟು | |
| | ದಾ | ಹಾ | ದಾ | ಹಾ | ದಾ | ಹಾ | ದಾ | ಹಾ | ದಾ | ಹಾ | ದಾ | ಹಾ | ದಾ | ಹಾ | ದಾ | ಹಾ |
| 2006-07 | | | | | | | | | | | | | | | | |
| 2007-08 | | | | | | | | | | | | | | | | |
| 2008-09 | | | | | | | | | | | | | | | | |
| 2009-10 | | | | | | | | | | | | | | | | |
| 2010-11 | | | | | | | | | | | | | | | | |

| | | |
|---|---|---|
| 12 | ಸಿಬ್ಬಂದಿ ಮಾದರಿಯ ಬಗ್ಗೆ ರಚಿಸಿದ ನಿಯಮಾವಳಿಗನುಸಾರ, ಅಂದರೆ, ಕರ್ನಾಟಕ ಶಿಕ್ಷಣ ಸಂಸ್ಥೆಗಳು [ಅನುದಾನಿತ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ ಮತ್ತು ಸೇವಾ ಷರತ್ತುಗಳು] ನಿಯಮಗಳು-1999ರ ಪ್ರಕಾರ ಅರ್ಹರಾದ ಬೋಧಕ ಸಿಬ್ಬಂದಿ ವರ್ಗವನ್ನು ನೇಮಕ ಮಾಡಿಕೊಳ್ಳಲಾಗಿದೆಯೇ? | |
| 13 | ಅ] ಸದರಿ ಶಾಲೆಗೆ ಸಂಬಂಧಿಸಿದಂತೆ ಬೋಧಕ / ಬೋಧಕೇತರ ಸಿಬ್ಬಂದಿಯನ್ನು ಕರ್ನಾಟಕ ಶಿಕ್ಷಣ ಸಂಸ್ಥೆಗಳು [ಅನುದಾನ ಇಲ್ಲದ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಹಾಗೂ ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳ ನೌಕರರ ಕೆಲವು ಸೇವಾ ಷರತ್ತು ಮತ್ತು ನಿಬಂಧನೆಗಳು] ನಿಯಮಗಳು-2005ರನ್ವಯ ನಿಗದಿ ಪಡಿಸಿದ ಸೇವಾ ಸೌಲಭ್ಯಗಳನ್ನು / ಷರತ್ತುಗಳನ್ನು ನೀಡಲಾಗಿದೆಯೇ? | |
| | ಆ] ಸದರಿ ನಿಯಮಗಳ ನಿಯಮ-5ರಂತೆ ಲಿಖಿತ ನೇಮಕಾತಿ ಆದೇಶವನ್ನು | |

| | | |
|---|---|---|
| | ನೀಡಲಾಗಿದೆಯೇ? ಪ್ರತಿಯೊಬ್ಬ ನೌಕರನಿಗೆ ಸಂಬಂಧಿಸಿದಂತೆ ಸೇವಾ ಪುಸ್ತಕವನ್ನು ಹಾಗೂ Schedule of Employment, ಇವುಗಳನ್ನು ನಿರ್ವಹಿಸಲಾಗಿದೆಯೇ? | |
| | *ಇ]* ಸದರಿ ನಿಯಮಗಳ ನಿಯಮ–6ರನ್ವಯ ನಿಷೇಧಿಸಿದಂತೆ, ನೇಮಕಾತಿಯ ಸಮಯದಲ್ಲಿಯೇ ಯಾವುದೇ ದಿನಾಂಕ ನಮೂದಿಸದೇ ರಾಜೀನಾಮೆ ಪತ್ರವನ್ನು ಪಡೆಯದಿರುವ ಬಗ್ಗೆ ಹಾಗೂ ಅಂತಹ ಪತ್ರವನ್ನು ನೀಡಬೇಕೆಂದು ಸಂಬಂದಿಸಿದ ನೌಕರರನ್ನು ಒತ್ತಾಯಿಸದಿರುವ ಬಗ್ಗೆ ಸಂಬಂಧಿಸಿದ ಉಪ ನಿರ್ದೇಶಕರು ಖಚಿತಪಡಿಸಿಕೊಂಡಿದ್ದಾರೆಯೇ? | |
| | ***ಈ]*** ಕರ್ನಾಟಕ ಶಿಕ್ಷಣ ಅಧಿನಿಯಮ–1983ರ ಸೆಕ್ಷನ್–92ರನ್ವಯ ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರನ್ನು ಅದರನ್ವಯ ವಿಚಾರಣೆ ನಡೆಸದೇ, ಸೇವೆಯಿಂದ ವಜಾ ಮಾಡಲು ಅಥವಾ ತೆಗೆದು ಹಾಕಲು ಬರುವುದಿಲ್ಲ. ಸದರಿ ನಿಯಮಗಳನ್ನು ಅಥವಾ ಅಧಿನಿಯಮದ ಉಪ ಬಂಧಗಳನ್ನು ಉಲ್ಲಂಘಿಸಿ, ಆಡಳಿತ ಮಂಡಳಿ ಅದರ ನೌಕರನ ವಿರುದ್ಧ ಕ್ರಮ ತೆಗೆದುಕೊಂಡಿದೆಯೇ? | |
| 14 | ಅ] ದಿ:01.06.1987 ರಿಂದ 1994–95ನೇ ಶೈಕ್ಷಣಿಕ ಸಾಲಿನ ಅವದಿಯಲ್ಲಿ ಸಂಬಂಧಿಸಿದ ಖಾಸಗಿ ಪ್ರಾಥಮಿಕ ಶಾಲೆ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ಪ್ರಾರಂಭಿಸಿ ಇಲ್ಲಿಯವರೆಗೆ ಯಾವುದೇ ವಿಚ್ಛಿನ್ನತೆ ಇಲ್ಲದೇ, ಸತತವಾಗಿ ನಡೆಸಲಾಗಿದೆಯೇ? ಈ ಅವಧಿಯಲ್ಲಿ ಯಾವುದೇ ವಿಚ್ಛಿನ್ನತೆ ಇಲ್ಲದೇ ಸತತವಾಗಿ ವಿದ್ಯಾರ್ಥಿಗಳನ್ನು ಪಬ್ಲಿಕ್ ಪರೀಕ್ಷೆಗಳಿಗೆ ಕೂಡಿಸಲಾಗಿದೆಯೇ? ಹಾಗೂ ಸತತವಾಗಿ ನಡೆಸಲಾಗುತ್ತಿದೆಯೇ?<br>ಆ] ಪ್ರಾಥಮಿಕ ಶಾಲೆಗಳಲ್ಲಿ 7ನೇ ತರಗತಿ ಪರೀಕ್ಷೆಯ ಫಲಿತಾಂಶವು ಕಳೆದ 5 ವರ್ಷಗಳಲ್ಲಿನ ಸಂಬಂಧಿಸಿದ ಜಿಲ್ಲೆಯ ಸರಾಸರಿ ಫಲಿತಾಂಶಕ್ಕಿಂತ ಕಡಿಮೆ ಇದೆಯೇ? | |
| 15 | ದಾಖಲಾತಿಯಲ್ಲಿ ಮೀಸಲಾತಿಗೆ ಸಂಬಂದಿಸಿದಂತೆ ದಿ:22.11.2006ರ ಆದೇಶ ಸಂಖ್ಯೆ:ಇಡಿ:46:ಎಸ್ಇಪಿ 2006[ಪಿ], ದಿ:27.12.2006ರ ಆದೇಶ ಸಂಖ್ಯೆ:ಇಡಿ: 380:ಎಸ್ಇಪಿ:2006 ಮತ್ತು ದಿ:24.03.2007ರ ಆದೇಶ ಸಂಕ್ಯೆ:ಇಡಿ:46;ಎಸ್ಇಪಿ:2006[ಭಾಗ] | |

| | | |
|---|---|---|
| | ಇವುಗಳ ಪ್ರಕಾರ ಸರ್ಕಾರ ನಿಗದಿಪಡಿಸಿದ ಶೇಕಡಾವಾರಿನ ಪ್ರಕಾರ ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ಮಕ್ಕಳಿಗೆ ದಾಖಲಾತಿಯಲ್ಲಿ ಪ್ರಾತಿನಿಧ್ಯತೆಯನ್ನು ನೀಡಲಾಗಿದೆಯೇ? | |
| 16 | ಸಂಬಂಧಿಸಿದ ಶಾಲೆ ನೊಂದಣಿಯಾಗಿದೆಯೇ? ಹಾಗೂ ಮಾನ್ಯತೆ ಪಡೆದಿದೆಯೇ? ಮತ್ತು ಸಹಾಯಾನುದಾನ ನೀಡುವ ವರ್ಷದವರೆಗೆ ನೊಂದಣಿ ಮತ್ತು ಮಾನ್ಯತೆಯ ನವೀಕರಣವನ್ನು ಹಾಗೂ ಮಾನ್ಯತೆಯನ್ನು ಪಡೆದಿದೆಯೇ?<br>ಟಿಪ್ಪಣಿ: ಆದಾಗ್ಯೂ ಹಾಗಿಲ್ಲದಿದ್ದಲ್ಲಿ ಸಂಬಂಧಿಸಿದ ಖಾಸಗಿ ಶಾಲೆ ಸತತವಾಗಿ ನಡೆದಿದ್ದು, ಸಕಾರಣಕ್ಕಾಗಿ ಹಿಂದಿನ ಕೆಲವು ವರ್ಷಗಳಿಗೆ ಮಾನ್ಯತೆಯನ್ನು ಪಡೆಯದೇ ಇದ್ದರೂ, ಪ್ರಸ್ತುತ [ಅಂದರೆ ಇತ್ತೀಚಿನ] ಮಾನ್ಯತೆ ಪಡೆದಿದ್ದಲ್ಲಿ ಅದರ ಆಧಾರದ ಮೇಲೆ ಸಹಾಯಾನುದಾನಕ್ಕೆ ಒಳಪಡಿಸುವ ಕುರಿತು ಪರಿಗಣಿಸಬಹುದು. | |
| 17 | ಶಾಲೆಯ ಸುತ್ತಮುತ್ತಲಿನ ಪ್ರದೇಶವು ಆರೋಗ್ಯಕರವಾದ ಹಾಗೂ ನಿರ್ಮಲವಾದ ವಾತಾವರಣವನ್ನು ಹೊಂದಿದೆಯೇ? | |
| 18 | ಸದರಿ ಶಾಲೆಗಾಗಿ ನೇಮಕಾತಿ ಮಾಡಿಕೊಂಡಿರುವ ನೌಕರರು ತತ್ಸಂಬಂದ ಹುದ್ದೆಗಳಿಗೆ ನಿಗದಿಪಡಿಸಿರುವ ವಿದ್ಯಾರ್ಹತೆ ಮತ್ತು ವಯೋಮಿತಿ ಕಡ್ಡಾಯವಾಗಿ ಹೊಂದಿದ್ದಾರೆಯೇ? | . |
| 19 | ಕೆಲಸ ನಿರ್ವಹಿಸುತ್ತಿರುವ ನೌಕರರ ವಿವರ | |

| ಕ್ರ. ಸಂ | ನೌಕರರ ಹೆಸರು ಮತ್ತು ಪದನಾಮ | ವಿದ್ಯಾರ್ಹತೆ | ಜನ್ಮ ದಿನಾಂಕ | ನೇಮಕಾತಿ ದಿನಾಂಕ | ಹಾಜರಾದ ದಿನಾಂಕ | ಶಿಕ್ಷಕರು ಯಾವ ಮೀಸಲಾತಿ ವರ್ಗಕ್ಕೆ ಸೇರಿದವರು | ಇಲಾಖಾ ಅನುಮೋದನೆ ದಿನಾಂಕ |
|---|---|---|---|---|---|---|---|
| 01 | 02 | 03 | 04 | 05 | 06 | 07 | 08 |
| 01. | | | | | | | |
| 02. | | | | | | | |
| 03. | | | | | | | |
| 04. | | | | | | | |

| | | | | | | | |
|---|---|---|---|---|---|---|---|
| 05. | | | | | | | |
| 06. | | | | | | | |

| | | |
|---|---|---|
| 20 | ಪ್ರತಿಯೊಂದು ನೇಮಕಾತಿಗೆ ಸಂಬಂಧಿಸಿದಂತೆ ನಮೂನೆ-4ರ ಚೆಕ್ ಲಿಸ್ಟ್‌ನಲ್ಲಿ ವಿವರಗಳನ್ನು ನೀಡಲಾಗಿದೆಯೇ? | |
| 21 | ಸರ್ಕಾರದ ಮೀಸಲಾತಿ ಆದೇಶಗಳನ್ವಯ ನಿಗದಿಪಡಿಸದ 100 ಬಿಂದುಗಳ ಮೀಸಲಾತಿ ರೋಸ್ಟರಿನ ಪ್ರಕಾರ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಕ್ಕೆ ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ ಸೇರಿದವರ ಸಾಕಷ್ಟು ಪ್ರಾತಿನಿಧ್ಯತೆ ಇದೆಯೇ? | |
| 22 | ***ಅ]*** ಸದರಿ ಪ್ರಾಥಮಿಕ / ಪ್ರೌಢಶಾಲೆ ಪ್ರಥಮ ಮಾನ್ಯತೆ ಪಡೆದ ಬಗ್ಗೆ ದೃಢೀಕೃತ ದಾಖಲೆ ಒದಗಿಸಲಾಗಿದೆಯೇ?<br>***ಆ]*** ಪ್ರಾಥಮಿಕ / ಪ್ರೌಢಶಾಲೆಗೆ ಮಾನ್ಯತೆ ನವೀಕರಣ ಮಾಡಿದ ಬಗ್ಗೆ ದೃಢೀಕೃತ ದಾಖಲೆ ಒದಗಿಸಲಾಗಿದೆಯೇ? | |
| 23 | ಪ್ರತಿಯೊಂದು ನೇಮಕಾತಿ ಮಾಡುವಾಗ ಪತ್ರಿಕಾ ಪ್ರಕಟಣೆ ನೀಡಲಾಗಿದೆಯೇ? ಸಂಬಂಧಿಸಿದ ಪತ್ರಿಕೆಯ ಮೂಲ ದಾಖಲಾತಿಯನ್ನು ಒದಗಿಸಲಾಗಿದೆಯೇ? | |
| 24 | ***ಅ]*** ಸದರಿ ಶಾಲೆಗಾಗಿ ನೇಮಕಾತಿಗಳನ್ನು ಮಾಡಿಕೊಳ್ಳಲು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯನ್ನು ಪಡೆಯಲಾಗಿದೆಯೇ?<br>***ಆ]*** ಒಂದು ವೇಳೆ, ಈಗಾಗಲೇ ಸಕ್ಷಮ ಪ್ರಾಧಿಕಾರದಿಂದ ನೇಮಕಾತಿ ಅನುಮೊದನೆ ಆಗದಿದ್ದಲ್ಲಿ ಜಿಲ್ಲಾ ಪರಿಶೀಲನಾ ಸಮಿತಿಯ ಮುಂದೆ ಮಂಡಿಸಿ ಸದರಿ ನೇಮಕಾತಿಗಳಿಗೆ ಅನುಮೋದನೆಯನ್ನು ಪಡೆಯಲಾಗಿದೆಯೇ? | |
| 25 | ನಿಗದಿತ ಸಿಬ್ಬಂದಿ ಮಾದರಿಯಂತೆ [ಡಿ.ಗುಂಪು ನೌಕರರನ್ನು ಹೊರತುಪಡಿಸಿ] ಎಲ್ಲಾ ಸಿಬ್ಬಂದಿಗಳನ್ನು ನೇಮಕ ಮಾಡಿದಿದ್ದರೆ ಮಾತ್ರ ಜಿಲ್ಲಾ ಪರಿಶೀಲನಾ ಸಮಿತಿ ಪರಿಗಣಿಸಿ, ಅನುಮೋದಿಸತಕ್ಕದ್ದು. ಈ ಅಂಶವನ್ನು ಪರಿಶೀಲಿಸಲಾಗಿದೆಯೇ? | |
| 26 | ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಪರಿಶೀಲನಾ ಸಮಿತಿಯ ಸಹಾಯನುದಾನಕ್ಕೆ ಒಳಪಡಿಸಲು ಶಿಫಾರಸ್ಸು ಇದೆಯೇ? | |
| 27 | ನಿಗದಿತ ಸಿಬ್ಬಂದಿ ಮಾದರಿ ಮತ್ತು ನೇಮಕಾತಿ ಕಾರ್ಯವಿಧಾನದನ್ವಯ ನೇಮಕಾತಿಗಳಾಗಿರಬೇಕು. ಸರ್ಕಾರದ ಮೀಸಲಾತಿ ಆದೇಶಗಳನ್ವಯ ನೇಮಕಾತಿಯಲ್ಲಿ ಮೀಸಲಾತಿಯನ್ನು ಪಾಲಿಸಲಾಗಿದೆಯೇ? | |
| 28 | ಸದರಿ ಶಾಲೆಯನ್ನು ಸಂಸ್ಥೆಯ ಸ್ವಂತ ಕಟ್ಟಡದಲ್ಲಿ ನಡೆಸಲಾಗುತ್ತಿದೆಯೇ ಅಥವಾ ಬಾಡಿಗೆ ಕಟ್ಟಡದಲ್ಲಿ ನಡೆಸಲಾಗುತ್ತಿದೆಯೇ? (ಕರಾರು ಒಪ್ಪಂದ ಮಾಡಿಕೊಂಡಿದ್ದಾರೆಯೇ ?) | |

| | | |
|---|---|---|
| 29 | ಶಿಕ್ಷಕರಿಗೆ ಬ್ಯಾಂಕ್ ಖಾತೆಯ ಮುಖಾಂತರ ವೇತನ – ಪಾವತಿಸಲಾಗುತ್ತಿದೆಯೇ? | |
| 30 | ಕನಿಷ್ಟ ಮೂಲವೇತನ 6800/ ರೂ ವೇತನ ನೀಡಲಾಗುತ್ತಿದೆಯೇ? | |
| 31 | ಶಾಲೆಯಲ್ಲಿ ಸುರಕ್ಷತಾ ಕ್ರಮ ತೆಗೆದುಕೊಂಡಿದ್ದಾರೆಯೇ? | |
| 32 | ಈ ಹಿಂದೆ ಶಾಲೆಯು ಸ್ಥಳಾಂತರ /ಹಸ್ತಾಂತರ ಆಗಿದೆಯೇ? | |
| 33 | ಸಂಬಂಧಿಸಿದ ಶಾಲೆಯನ್ನು ವೇತನಾನುದಾನಕ್ಕೆ ಒಳಪಡಿಸುವ ಕುರಿತು ಇಲಾಖಾ ತ್ರಿಸದಸ್ಯ ಸಮಿತಿಯ ಶಿಫಾರಸ್ಸು ಸ್ಪಷ್ಟ ಅಭಿಪ್ರಾಯದೊಂದಿಗೆ: | |

**ಶಾಲಾ ಭೇಟಿಯ ದಿನಾಂಕ :**

**ಜಿಲ್ಲಾ ನೋಡೆಲ್ ಅಧಿಕಾರಿಗಳು ಸಹಿ**

**ಸಹನಿರ್ದೇಶಕರು (ಬೆಂಗಳೂರು/ಮೈಸೂರು ವಿಭಾಗ) ಸಹಿ**
**ಸಾರ್ವಜನಿಕ ಶಿಕ್ಷಣ ಇಲಾಖೆ**

**ಪ್ರಾಂಶುಪಾಲರು ಸಹಿ**
**ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ**